# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 03 ಎಸ್‌ಎಲ್‌ಬಿ 2006 ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:22-02-2006.

## ಸುತ್ತೋಲೆ

ವಿಷಯ : ಒಂದು ಖಾಸಗಿ ಶಿಕ್ಷಣ ಸಂಸ್ಥೆ ನಡೆಸುವ ಅನುದಾನಿತ ಖಾಸಗಿ ಶಾಲೆಗಳು ಒಂದಕ್ಕಿಂತ ಹೆಚ್ಚು ಜಿಲ್ಲೆಗಳಲ್ಲಿರುವ ಸಂದರ್ಭದಲ್ಲಿ, ಅಂತಹ ಶಾಲೆಗಳಲ್ಲಿನ ಅನುದಾನಿತ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ತುಂಬುವ ಬಗ್ಗೆ ಪ್ರಕ್ರಿಯೆಯನ್ನು ನಡೆಸಲು ಯಾವ ಮಟ್ಟದಲ್ಲಿ ಅನುಮತಿ ನೀಡಬೇಕು ಹಾಗೂ ಬಡ್ತಿಗಳನ್ನು ಯಾವ ಹಂತದಲ್ಲಿ ಅನುಮೋದಿಸಬೇಕೆಂಬ ಬಗ್ಗೆ ಸ್ಪಷ್ಟೀಕರಣ.

-0-

ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 1999ರ Annexure-1ರ ಅನ್ವಯ, ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿನ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ತುಂಬುವ ಕಾರ್ಯವಿಧಾನವನ್ನು ನಿಗದಿಪಡಿಸಲಾಗಿದೆ. ಅದೇ ರೀತಿ ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿನ ಮುಖ್ಯೋಪಾಧ್ಯಾಯರ ಹುದ್ದೆಗಳನ್ನು ಬಡ್ತಿಯ ಮೂಲಕ ತುಂಬುವ ಕಾರ್ಯವಿಧಾನವನ್ನು ಸದರಿ ನಿಯಮಗಳ Annexure-VIರ ಅನ್ವಯ ನಿಗದಿಪಡಿಸಲಾಗಿದೆ.

2. ಒಂದು ಖಾಸಗಿ ಶಿಕ್ಷಣ ಸಂಸ್ಥೆ ನಡೆಸುವ ಅನುದಾನಿತ ಖಾಸಗಿ ಶಾಲೆಗಳು ಒಂದಕ್ಕಿಂತ ಹೆಚ್ಚು ಜಿಲ್ಲೆಗಳಲ್ಲಿ ಇರುವ ಸಂದರ್ಭದಲ್ಲಿ, ಅಂತಹ ಶಾಲೆಗಳಲ್ಲಿನ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಅನುಮತಿ ನೀಡುವ ಪ್ರಕ್ರಿಯೆಯನ್ನು ಯಾವ ಹಂತದಲ್ಲಿ ನಡೆಸಬೇಕೆಂಬ ಬಗ್ಗೆ ಹಾಗೂ ಅಂತಹ ಶಾಲೆಗಳಲ್ಲಿನ ಹುದ್ದೆಗಳಿಗೆ ಬಡ್ತಿಗಳನ್ನು ಯಾವ ಹಂತದಲ್ಲಿ ಅನುಮೋದಿಸಬೇಕೆಂಬ ಬಗ್ಗೆ ಮೇಲೆ ಉಲ್ಲೇಖಿಸಲಾದ ನಿಯಮಗಳನ್ನು ಉಲ್ಲೇಖಿಸಿ, ಈ ಕೆಳಕಂಡ ಕಾರಣಗಳಿಗಾಗಿ, ಸೂಕ್ತ ಸ್ಪಷ್ಟೀಕರಣ ನೀಡುವುದು ಅಗತ್ಯವಾಗಿದೆ :-

(ಅ) ಮೇಲೆ ಉಲ್ಲೇಖಿಸಲಾದ ನಿಯಮಗಳ ನಿಯಮ 5(ಬ)ರಂತೆ ಒಂದು ಆಡಳಿತ ಮಂಡಳಿ ಒಂದಕ್ಕಿಂತ ಹೆಚ್ಚು ಅನುದಾನಿತ ಖಾಸಗಿ ಶಾಲೆಗಳನ್ನು ನಡೆಸುತ್ತಿದ್ದಲ್ಲಿ, ಅದಕ್ಕೆ ಸಂಬಂಧಿಸಿದ ಉದ್ಯೋಗದ ಅಧಿಸೂಚಿ (Schedule of Employment) ಹಾಗೂ

SO SEC A

ಜೇಷ್ಠತಾ ಪಟ್ಟಿ ಮತ್ತು ಮೀಸಲಾತಿ ರೋಸ್ಟರನ್ನು ಆಡಳಿತ ಮಂಡಳಿವಾರು (managementwise) ನಿರ್ವಹಿಸಬೇಕಾಗಿದೆ;

(ಅ) ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 16-ಎರ ಅಡಿಯಲ್ಲಿರುವ ವಿವರಣೆ (explanation) ಪ್ರಕಾರ ಜೇಷ್ಠತಾ ಘಟಕ (unit of seniority) ಅಂದರೆ, ಆಯಾಯಾ ನೇಮಕಾತಿ ಪ್ರಾಧಿಕಾರದ ಕಾರ್ಯ ವ್ಯಾಪ್ತಿ (jurisdiction of the apponting authority) ಎಂದು ವ್ಯಾಖ್ಯಾನಿಸಲಾಗಿದೆ;

(ಇ) ಇದಲ್ಲದೆ, ಸದರಿ ನಿಯಮಗಳ Annexure-1ರ ಅನ್ವಯ ನಿಗದಿಪಡಿಸಲಾದ, ಆಯಾಯ ಜಿಲ್ಲಾ ಪಂಚಾಯತ್ತಿನ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಪರಿಶೀಲನಾ ಸಮಿತಿಯ ಕಾರ್ಯ ವ್ಯಾಪ್ತಿಯು ಆಯಾಯ ಜಿಲ್ಲೆಗೆ ಮಾತ್ರ ಸೀಮಿತವಾಗಿರುತ್ತದೆ. ಒಂದು ಅನುದಾನಿತ ಖಾಸಗಿ ಸಂಸ್ಥೆ ನಡೆಸುತ್ತಿರುವ ಶಾಲೆಗಳು ಒಂದಕ್ಕಿಂತ ಹೆಚ್ಚು ಜಿಲ್ಲೆಗಳಲ್ಲಿ ಇದ್ದಲ್ಲಿ, ಮೇಲೆ ಹೇಳಿದಂತೆ, ಅವುಗಳಿಗೆ ಸಂಬಂಧಿಸಿದ ಒಂದು ಸಾಮಾನ್ಯ, ಅಂದರೆ, ಆಡಳಿತ ಮಂಡಳಿವಾರು ಮೀಸಲಾತಿ ರೋಸ್ಟರ್‌ನ್ನು ನಿರ್ವಹಿಸಬೇಕಾಗಿದೆ ಹಾಗೂ ಜೇಷ್ಠತೆಯನ್ನೂ ಸಹ ಆಡಳಿತ ಮಂಡಳಿವಾರು ನಿರ್ವಹಿಸಬೇಕಾಗಿದೆ. ಇಂತಹ ಸಂದರ್ಭದಲ್ಲಿ ಮೇಲೆ ಉಲ್ಲೇಖಿಸಲಾದ, ಒಂದೊಂದೇ ಜಿಲ್ಲೆಗೆ ಸೀಮಿತವಾದ ಪರಿಶೀಲನಾ ಸಮಿತಿ ಕಾರ್ಯ ನಿರ್ವಹಿಸುವುದು ಸಾಧ್ಯವಾಗುವುದಿಲ್ಲ.

3. ಈ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಈ ಮೂಲಕ ಸ್ಪಷ್ಟೀಕರಿಸಿದೆ :-

<u>(ಅ) ನೇರ ನೇಮಕಾತಿಗೆ ಸಂಬಂಧಿಸಿದಂತೆ :-</u> ಒಂದು ಖಾಸಗಿ ಶಿಕ್ಷಣ ಸಂಸ್ಥೆ ನಡೆಸುತ್ತಿರುವ ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಒಂದು ಜಿಲ್ಲೆಗಿಂತ ಹೆಚ್ಚಿನ ಜಿಲ್ಲೆಗಳಲ್ಲಿರುವ ಸಂದರ್ಭದಲ್ಲಿ, ಈ ಎಲ್ಲಾ ಶಾಲೆಗಳು ಒಂದೇ ಆಯುಕ್ತಾಲಯದ ಕಾರ್ಯ ವ್ಯಾಪ್ತಿಯಲ್ಲಿ ಬರುವ ಸಂದರ್ಭದಲ್ಲಿ, ಅವುಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಅನುಮತಿ ನೀಡುವ ಪ್ರಕ್ರಿಯೆಯನ್ನು, <u>ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಮಿತವ್ಯಯ ಆದೇಶಗಳಿಗೆ ಒಳಪಟ್ಟು,</u> ಸಂಬಂಧಿಸಿದ ಆಯುಕ್ತರ ಮಟ್ಟ ನಡೆಸತಕ್ಕದ್ದು. ಅದರೆ ಒಂದು ಖಾಸಗಿ ಸಂಸ್ಥೆ ನಡೆಸುವ ಅನುದಾನಿತ ಶಾಲೆಗಳು ಒಂದಕ್ಕಿಂತ ಹೆಚ್ಚು ಆಯುಕ್ತಾಲಯ ವ್ಯಾಪ್ತಿಯಲ್ಲಿ ಬರುವ ಸಂದರ್ಭದಲ್ಲಿ, ಅಂತಹ ಶಾಲೆಗಳಲ್ಲಿನ

SO SE

ಹುದ್ದೆಗಳನ್ನು ತುಂಬಲು ಅನುಮತಿ ನೀಡುವ ಪ್ರಕ್ರಿಯೆಯನ್ನು, _ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಮಿತವ್ಯಯ ಆದೇಶಗಳಿಗೆ ಒಳಪಟ್ಟು_, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಹಂತದಲ್ಲಿ (ಎಲ್ಲಾ ಆಯುಕ್ತಾಲಯಗಳಿಗೆ ಸಂಬಂಧಿಸಿದಂತೆ) ಕೇಂದ್ರೀಕೃತವಾಗಿ ನಡೆಸತಕ್ಕದ್ದು;

_(ಆ) ಬಡ್ತಿಗೆ ಸಂಬಂಧಿಸಿದಂತೆ :-_ ಒಂದು ಖಾಸಗಿ ಶಿಕ್ಷಣ ಸಂಸ್ಥೆ ನಡೆಸುವ ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಒಂದಕ್ಕಿಂತ ಹೆಚ್ಚು ಜಿಲ್ಲೆಗಳಲ್ಲಿ ನಡೆಸುತ್ತಿದ್ದಲ್ಲಿ, ಅಂತಹ ಶಾಲೆಗಳಲ್ಲಿನ ಹುದ್ದೆಗಳಿಗೆ ಬಡ್ತಿಗಳನ್ನು ಅನುಮೋದಿಸುವ ಪ್ರಕ್ರಿಯೆಯನ್ನೂ ಸಹ ಮೇಲೆ (ಅ)ದಲ್ಲಿ ಹೇಳಿದಂತೆ ನಡೆಸತಕ್ಕದ್ದು.

4. ಮೇಲೆ ನೀಡಿದ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪರಿಶೀಲಿಸತಕ್ಕದ್ದು.

(ಸಿದ್ದಲಿಂಗಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

_ಗೆ:_

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರಿಗೆ. ಈ ಸುತ್ತೋಲೆಯನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಅದರ 600 ಪ್ರತಿಗಳನ್ನು ಶಿಕ್ಷಣ ಇಲಾಖೆಯ ಪ್ರೌಢ -ಎ ಶಾಖೆಗೆ ಕಳುಹಿಸಲು ಕೋರಿದೆ.

**ಪ್ರತಿ:-**

1) ಆಯುಕ್ತರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಗುಲ್ಬರ್ಗಾ/ಧಾರವಾಡ/ ಇವರುಗಳಿಗೆ.
2) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
3) ನಿರ್ದೇಶಕರು, ಪ್ರೌಢ ಶಿಕ್ಷಣ/ಪ್ರಾಥಮಿಕ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
4) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳು ಹಾಗೂ ಸಹ ನಿರ್ದೇಶಕರುಗಳಿಗೆ.
5) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪ ನಿರ್ದೇಶಕರುಗಳಿಗೆ.
6) ಶಿಕ್ಷಣ ಇಲಾಖೆಯ ಎಲ್ಲಾ ಶಾಖೆಗಳಿಗೆ.
7) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ / [illegible]